# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಅಸಲು ದಾವಾ ಸಂಖ್ಯೆ **181/2023**

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ಮುನೀರ್ ಆರ್ | ಡಿ.ಡಬ್ಲ್ಯೂಃ**3** |
| **ತಂದೆಯ ಹೆಸರು** | : | ರಜಾಖ್ ಸಾಬ್ | |
| **ವಯಸ್ಸು** | : | 57 ವರ್ಷ | |
| **ವೃತ್ತಿ** | : | ಸರ್ವೇಯರ್ | |
| **ವಾಸಸ್ಥಳ** | : | ದಾವಣಗೆರೆ | |

ದಿನಾಂಕಃ **03-01-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ನ್ಯಾಯಾಲಯದ ಪರವಾಗಿಃ-

ನಾನು 2008 ರಿಂದ ಇಲ್ಲಿಯವರೆಗೂ ಹೊನ್ನಾಳಿ ತಾಲ್ಲೂಕು ಕಚೇರಿಯಲ್ಲಿ ಸರ್ವೇ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2019 ನೇ ಸಾಲಿನಲ್ಲಿ ರುದ್ರಮ್ಮ ಎಂಬುವವರು ಸರ್ವೇ ನಂ.1/2 ರ ಜಮೀನಿನ ಹದ್ದುಬಸ್ತು ಮಾಡಲು ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿಯ ಆಧಾರದ ಮೇಲೆ ಸರ್ವೇ ನಂ.1/2 ರ ಆಜುಬಾಜುದಾರರಿಗೆ ನೋಟೀಸನ್ನು ಜಾರಿ ಮಾಡಿ ನಂತರ ದಿಃ 07-08-2019 ರಂದು ಸರ್ವೇ ನಂ.1/2 ಕ್ಕೆ ಭೇಟಿ ನೀಡಿ ಸರ್ವೇ ಮಾಡಿ ವರದಿಯನ್ನು ಸಲ್ಲಿಸಿರುತ್ತೇನೆ.

ಈ ಸಂಬಂಧವಾಗಿ ಸಾಕ್ಷಿಯು ನಿಪಿ-4 ರಿಂದ 6 ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ವಾದಿಯ ಪರ ವಕೀಲರಿಂದಃ-

ನಾನು ಹೊನ್ನಾಳಿ ತಾಲ್ಲೂಕು ಸರ್ವೇ ಕಚೇರಿಯಲ್ಲಿ ಹಿರಿಯ ಸರ್ವೇ ಅಧಿಕಾರಿ ಎಂದರೆ ಸರಿ. ಸರ್ವೇ ನಂ.1/2 ರ ಜಮೀನನ್ನು ಸರ್ವೇ ಮಾಡಲು ಆಜುಬಾಜುದಾರರಿಗೆ ಬಾಂದುಜವಾನರ ಮೂಲಕ ನೋಟೀಸನ್ನು ಜಾರಿ ಮಾಡಿರುತ್ತೇವೆ. ನೋಟೀಸು ಯಾವ ದಿನಾಂಕದಂದು ಜಾರಿ ಮಾಡಿದ್ದಾರೆ ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಸಾಕ್ಷಿಗೆ ಸದರಿ ನೋಟೀಸಿಗೆ ಆಜುಬಾಜುದಾರರೇ ಸಹಿ ಮಾಡಿದ್ದಾರೆ ಅಥವಾ ಬೇರೆಯವರು ಸಹಿ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.1/2 ರಲ್ಲಿ ಒಟ್ಟು 1 ಎಕರೆ 36 ಗುಂಟೆ ಜಮೀನು ಇರುತ್ತದೆ. ಸರ್ವೇ ಮಾಡಲು ಯಾರು ಅರ್ಜಿ ಕೊಟ್ಟಿರುತ್ತಾರೆ ಅವರ ಜಮೀನನ್ನು ಮತ್ತು ಸದರಿ ಜಮೀನಿನ ಸುತ್ತ ಮುತ್ತ ಇರುವ ಜಮೀನನ್ನು ಸಹ ಸರ್ವೇ ಮಾಡುತ್ತೇವೆ. ಸರ್ವೇ ನಂ.1/2 ರ ಆಸ್ತಿಯನ್ನು ಸರ್ವೇ ಮಾಡುವ ಸಮಯದಲ್ಲಿ ಉತ್ತರ ಕಡೆಗೆ 2 ಜಮೀನುಗಳನ್ನು ಮತ್ತು ದಕ್ಷಿಣದ ಕಡೆ 1 ಜಮೀನನ್ನು ಅಳತೆ ಮಾಡಿರುತ್ತೇವೆ. ಸಾಕ್ಷಿಗೆ ಸಾಮಾನ್ಯವಾಗಿ ಯಾರಾದರೂ ಸರ್ವೇ ಮಾಡಲು ಅರ್ಜಿಯನ್ನು ಸಲ್ಲಿಸಿದ ಸಮಯದಲ್ಲಿ ಅವರ ಜಮೀನು ಒತ್ತುವರಿಯಾಗಿದ್ದರೆ ಮಾತ್ರ ಒತ್ತುವರಿಯಾಗಿದೆ ಎಂದು ತೋರಿಸುತ್ತೇವೆ ಎಂದರೆ ಸರಿ. ಸರ್ವೇ ನಂ.1/2 ರ ಪಶ್ಚಿಮ ದಿಕ್ಕಿಗೆ ಸರ್ವೇ ನಂ.1/4 ರ ಹಿಡುವಳಿದಾರರು 4 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ. ನಿಡಿ-6 ನಕಾಶೆಯಲ್ಲಿ ಸರ್ವೇ ನಂ.1/2 ರ ಉತ್ತರದಿಂದ ದಕ್ಷಿಣ ದಿಕ್ಕಿಗೆ ಎಷ್ಟು ಚೈನ್ ಮತ್ತು ಲಿಂಕ್ ಬರುತ್ತದೆ ಎಂದು ನಮೂದು ಮಾಡಿರುವುದಿಲ್ಲ ಆದರೆ ಹಿಸ್ಸಾ ಟಿಪ್ಪಣಿಯಲ್ಲಿ ನಮೂದು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಡಿ-6 ನಕಾಶೆಯು ಸರ್ವೇ ನಂ.1/2 ರ 1 ಎಕರೆ 36 ಗುಂಟೆ ಜಮೀನಿಗೆ ಮಾತ್ರ ಸಂಬಂಧಪಟ್ಟಿದ್ದು ಎಂದರೆ ಸರಿ. ನಿಡಿ-6 ನಕಾಶೆಯಲ್ಲಿ ಎಷ್ಟು ಚೈನ್ ಮತ್ತು ಲಿಂಕ್ ಬರುತ್ತದೆ ಎಂದು ನಮೂದು ಮಾಡಲು ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನಕಾಶೆಯಲ್ಲಿ ನಮೂದು ಮಾಡುವುದಿಲ್ಲ ಆದರೆ ಹಿಸ್ಸಾ ಟಿಪ್ಪಣಿಯಲ್ಲಿ ನಮೂದು ಮಾಡುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ವೇಳೆ ಸರ್ವೇ ನಂ.1/3 ರ ಮಾಲೀಕರು ಹದ್ದುಬಸ್ತಿಗೆ ಅರ್ಜಿಯನ್ನು ಸಲ್ಲಿಸಿದ್ದರೆ ಅಂತಹ ಸಮಯದಲ್ಲಿ ಸರ್ವೇ ನಂ.1/3 ರ ಜಮೀನನ್ನು ಆಜುಬಾಜುದಾರರು ಒತ್ತುವರಿ ಮಾಡಿದ್ದರೆ ನಕಾಶೆಯಲ್ಲಿ ತೋರಿಸುತ್ತಾರೆ ಎಂದರೆ ಸರಿ. ನಿಡಿ-6 ನಕಾಶೆಯಲ್ಲಿ ಗಡಿಗುರುತು 1, 2, 3, 4 ಎಂದು ಗುರುತಿಸಿರುವುದು ಸರ್ವೇ ನಂ.1/2 ರ 1 ಎಕರೆ 36 ಗುಂಟೆಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸರ್ವೇ ಮಾಡುವ ಸಮಯದಲ್ಲಿ ಆಜುಬಾಜುದಾರರು ಸಹಿ ಮಾಡಿದೇ ಇದ್ದ ಪಕ್ಷದಲ್ಲಿ ಗ್ರಾಮಸ್ಥರ ಸಹಿಯನ್ನು ಪಡೆದುಕೊಳ್ಳುತ್ತೀರಿ ಎಂದರೆ ಸಾಕ್ಷಿಯು ಗ್ರಾಮಸ್ಥರು ಹಾಜರಿದ್ದರೆ ಪಡೆದುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಸರ್ವೇ ನಂ.1/2 ರ ಜಮೀನನ್ನು ಸರ್ವೇ ಮಾಡುವ ಸಮಯದಲ್ಲಿ

ಗ್ರಾಮಸ್ಥರು ಇರುವ ಬಗ್ಗೆ ನನಗೆ ನೆನಪಿಲ್ಲ. ಸರ್ವೇ ನಂ.1/2 ರ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನಿನ ಹದ್ದುಬಸ್ತು ಕಾರ್ಯವನ್ನು ಮಾಡಿರುವುದಿಲ್ಲ. ನಿಡಿ-5 ವರದಿಯಲ್ಲಿ ಸರ್ವೇ ನಂ.1/2 ರ ಜಮೀನನ್ನು ಸರ್ವೇ ಮಾಡುವ ಸಮಯದಲ್ಲಿ ಸರ್ವೇ ನಂ.1 ರಲ್ಲಿ ಪೋಡಾಗಿರುವ ಎಲ್ಲಾ ಜಮೀನುಗಳನ್ನು ಅಳತೆ ಮಾಡಿ ಗಡಿ ಗುರುತಿಸಿರುವ ಬಗ್ಗೆ ನಮೂದು ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮೂದು ಮಾಡಿರುವುದಿಲ್ಲ ಆದರೆ ನಾವು ಪೋಡಾಗಿರುವ ಎಲ್ಲಾ ಜಮೀನುಗಳನ್ನು ಅಳತೆ ಮಾಡಿ ಗಡಿ ಗುರುತಿಸುತ್ತೇವೆ ಎಂದು ನುಡಿಯುತ್ತಾರೆ. ಸರ್ವೇ ನಂ.1 ರಲ್ಲಿ ಪೋಡಾಗಿರುವ ಎಲ್ಲಾ ಜಮೀನುಗಳನ್ನು ಅಳತೆ ಮಾಡಿ ಗಡಿ ಗುರುತಿಸಿಲ್ಲ ಎಂದರೆ ಸರಿಯಲ್ಲ. ನಿಡಿ-5 ರಲ್ಲಿ ಸರ್ವೇ ನಂ.1/2 ರ ಜಮೀನನ್ನು ಮೂಲ ಮತ್ತು ಹಿಸ್ಸಾ ಟಿಪ್ಪಣಿಯ ಆಧಾರದ ಮೇಲೆ ಅಳತೆ ಮಾಡಿ ಗಡಿ ಗುರುತಿಸಿದ್ದೀರಿ ಎಂದರೆ ಸರಿಯಲ್ಲ. ನಿಡಿ-4 ರಲ್ಲಿ ಆಜುಬಾಜುದಾರರಾಗಿ ಸಹಿ ಮಾಡಿರುವ ಪಂಚಾಕ್ಷರಪ್ಪ ಎಂದು 2 ಸಹಿಯನ್ನು ಒಬ್ಬರೇ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-4 ರ ನೋಟೀಸನ್ನು ರುದ್ರಮ್ಮರವರ ಪರವಾಗಿ ಗಣೇಶರವರು ಪಡೆದುಕೊಂಡಿರುತ್ತಾರೆ. ನಿಡಿ-5 ಕ್ಕೆ ರುದ್ರಮ್ಮರವರ ಪರವಾಗಿ ಅವರ ಮಗ ಗಣೇಶ ಸಹಿ ಮಾಡಿದ್ದಾರೆ ಎಂದರೆ ಸರಿ. ಸರ್ವೇ ನಂ.1 ರ ಜಮೀನು ಪೋಡಾಗಿರುವ ಬಗ್ಗೆ ದಾಖಲಾತಿಗಳನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನೋಡಿದ್ದೇನೆ ಎಂದು ನುಡಿಯುತ್ತಾರೆ. ಸರ್ವೇ ನಂ.1 ರ ಜಮೀನಿನಲ್ಲಿ ಪೋಡು ಮತ್ತು ಹದ್ದುಬಸ್ತು ಮಾಡಿರುವ ಸರ್ವೇ ಅಧಿಕಾರಿಯವರಿಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ನಾನು ಸರ್ವೇ ನಂ.1/2 ರ ಜಮೀನನ್ನು ಮಾತ್ರ ಪೋಡು ಮತ್ತು ಹದ್ದುಬಸ್ತು ಮಾಡಿದ್ದರಿಂದ ಸದರಿ ಜಮೀನನ್ನು ಹೊರತುಪಡಿಸಿ ಉಳಿದ ಪೋಡು ಮತ್ತು ಹದ್ದುಬಸ್ತು ಜಮೀನುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನಗೆ ಸರ್ವೇ ನಂ.1 ರ ಜಮೀನಿನ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲದಿದ್ದರೂ ಸಹ ಪ್ರತಿವಾದಿಗಳ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.